# ಡಯಟ್ ಮಾಯಿಪ್ಪಾಡಿಯಲ್ಲಿ "ಕನ್ನಡ ರಾಜ್ಯೋತ್ಸವ" ಹಾಗೂ ಅಧ್ಯಾಪಕ ವಿದ್ಯಾರ್ಥಿಗಳ "ಸಾಹಿತ್ಯ ಸಭೆ

"Kannada rajyotsava inaugurated by Dr. Ratnakara mallamoole asst prof govt college kasaragod"





ಮಾಯಿಪ್ಪಾಡಿ : **64** ನೇ "ಕನ್ನಡ ರಾಜ್ಯೋತ್ಸವ" ಹಾಗೂ ಅಧ್ಯಾಪಕ ವಿದ್ಯಾರ್ಥಿಗಳ "ಸಾಹಿತ್ಯ ಸಭೆ "ಯ ಉದ್ಘಾಟನಾ ಸಮಾರಂಭ ಕಳೆದ ಶನಿವಾರದಂದು ಡಯಟ್ ಮಾಯಿಪ್ಪಾಡಿಯಲ್ಲಿ ಜರುಗಿತು. ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ರತ್ನಾಕರ ಮಲ್ಲಮೂಲೆಯವರು ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು ಹಾಗೂ ಕನ್ನಡ ವಿದ್ಯಾರ್ಥಿಗಳ ಮ್ಯಾಗಜಿನ್ ಬಿಡುಗಡೆಗೊಳಿಸಿ ಮಾತನಾಡಿದರು. ಅವರು "ಕನ್ನಡ ಸಾಹಿತ್ಯದ ಚರಿತ್ರೆ" ಹಾಗು "ಕನ್ನಡಿಗರ ಸವಲತ್ತು"ಗಳ ಕುರಿತಾಗಿ ಮಾತನಾಡುತ್ತಾ, ಕನ್ನಡದ ಹುಟ್ಟು, ಪ್ರಮುಖ ಕವಿಗಳು, ಮುಖ್ಯ ಕಾಲ ಘಟ್ಟಗಳ ಕುರಿತಾಗಿ ತಿಳಿಸಿ ಕೊಟ್ಟರು.

ಸಭಾಕಾರ್ಯಕ್ರಮದಲ್ಲಿ ಡಯಟ್ ಮಾಯಿಪ್ಪಾಡಿಯ ಹಿರಿಯ ಪ್ರಾಧ್ಯಾಪಕರಾದ ರಮೇಶನ್ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಕನ್ನಡ ವಿಭಾಗದ ಅಧ್ಯಾಪಕರಾದ ರಾಧಾಕೃಷ್ಣ ಅವರು ಹಾಗು ಹಿರಿಯ ಯಕ್ಷಗಾನ ಕಲಾವಿದರೂ, ನಾಟ್ಯ ಗುರುಗಳೂ ಆದ ದಿವಾಣ ಶಿವಶಂಕರ ಭಟ್ ಅವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಜೊತೆಗೆ ಸಾಹಿತ್ಯ ಸಭೆಯ ಕಾರ್ಯದರ್ಶಿಯಾದ ದ್ವಿತೀಯ ವರ್ಷ ಅಧ್ಯಾಪಕ ವಿದ್ಯಾರ್ಥಿಯಾದ ವಿನಾಯಕ ಯಂ ಹಾಗೂ ಜೊತೆ ಕಾರ್ಯದರ್ಶಿಯಾದ ಪ್ರಥಮ ವರ್ಷದ ವಿದ್ಯಾರ್ಥಿಯಾದ ಧನುಷ್ ಅವರು ಉಪಸ್ಥಿತರಿದ್ದರು. ದ್ವಿತೀಯ ವರ್ಷದ ವಿದ್ಯಾರ್ಥಿಗಳು ಪ್ರಾರ್ಥನೆಯಲ್ಲಿ ಸಹಕರಿಸಿದರು.ಸ್ನೇಹ ಅವರು ಕನ್ನಡ ರಾಜ್ಯೋತ್ಸವದ ಕುರಿತಾಗಿ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು. ಈ ಕಾರ್ಯಕ್ರಮಕ್ಕೆ ಚೈತ್ರ ಅವರು ಸ್ವಾಗತಕೋರಿದರೆ, ನಿಶ್ಮಿತ ಹಾಗೂ ನಿವೇದಿತಾ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ವಿಖ್ಯಾತ್ ಅವರು ಧನ್ಯವಾದವನ್ನು ಸಮರ್ಪಿಸಿದರು. ಸಾಂಸ್ಕೃತಿಕ ಕಾರ್ಯಕ್ರದ ಅಂಗವಾಗಿ ವಿದ್ಯಾರ್ಥಿಗಳಿಂದ ಹಾಡು,ನೃತ್ಯ ನಡೆಯಿತು.